

# ಸೌಂದರ್ಯವರ್ಧನೆಗೆ ತೈಲಮರ್ದನ

ರಾಸಾಯನಿಕಯುಕ್ತ ಸೌಂದರ್ಯವರ್ಧಕಗಳು ಕೂದಲು ಹಾಗೂ ತ್ವಚೆಯ ಮೇಲೆ ದುಷ್ಪರಿಣಾಮ ಬೀರಬಹುದು. ಇದಕ್ಕೆ ಪ್ರತಿಯಾಗಿ ನಮ್ಮ ಪೂರ್ವಜರು ಬಳಸುವಂತಹ ನೈಸರ್ಗಿಕವಾದ, ಪರಿಶುದ್ಧವಾದ ತೈಲಗಳನ್ನು ಬಳಸಿದರೆ ಪ್ರಕೃತಿದತ್ತ ಸೌಂದರ್ಯವನ್ನು ಕಾಪಾಡಿಕೊಳ್ಳಬಹುದು.

■ **ಎಸ್.ಹೆಗಡೆ**

ಸೌಂದರ್ಯದ ಪರಿಕಲ್ಪನೆ ಬಹುಶಃ ಆದಿ ಮಾನವನ ಹಸಿವಿನ ಹೋರಾಟ ಒಂದು ತಹಬಂದಿಗೆ ಬಂದ ನಂತರ ಶುರುವಾಗಿರಬಹುದು. ಪ್ರಕೃತಿಯಲ್ಲಿ ಲಭ್ಯವಿರುವ ಕಲ್ಲು, ಮಣ್ಣು, ಗಿಡ–ಮರಗಳ ಉತ್ಪನ್ನಗಳನ್ನೇ ಬಳಸಿ ತ್ವಚೆ, ಕೂದಲಿನ ಅಂದವನ್ನು ವೃದ್ಧಿಸಿಕೊಳ್ಳುವ ಬಯಕೆ ಅಂದಿನಿಂದಲೇ ಆರಂಭ ಕಂಡಿರಬಹುದು. ಅದು ಕ್ರಮೇಣ ಆಧುನಿಕ ಮನುಷ್ಯ ನಿಸರ್ಗವನ್ನು ಮರೆತು ರಾಸಾಯನಿಕಯುಕ್ತ ಉತ್ಪನ್ನಗಳನ್ನು ಬಳಸಿ ಪ್ರಕೃತಿದತ್ತ ಚೆಲುವಿಗೆ ಕೃತ್ರಿಮತೆ ಪೂಸಿಕೊಳ್ಳುವತ್ತ ಬಂದು ನಿಂತಿದೆ. ಹೊಳೆಯುವ ಎಳೆಯ ತ್ವಚೆ ಸುಕ್ಕುಗಟ್ಟುವುದು, ಸೊಂಪಾದ ಅಲೆಗೂದಲು ಅಕಾಲಿಕ ನರೆಗೂದಲಾಗಿ ಮುಪ್ಪು ಅಡರಿದಂತಾಗುವುದು, ಕಣ್ಣ ಕೆಳಗೆ ಕಪ್ಪು ವೃತ್ತಗಳು ಗೋಚರವಾಗಿ ಕಣ್ಣಿನ ಕಾಂತಿಯೂ ಮಸುಕಾಗುವುದು.. ಇವುಗಳಿಗೆಲ್ಲ ಬಹುತೇಕ ಉತ್ಪನ್ನಗಳಲ್ಲಿ ಬಳಸುವ ರಾಸಾಯನಿಕಗಳ ಅಡ್ಡ ಪರಿಣಾಮವೇ ಕಾರಣ ಎಂಬುದು ಸಾಬೀತಾಗಿದ್ದು, ಮತ್ತೆ ಆಯುರ್ವೇದ, ಗಿಡಮೂಲಿಕೆಯತ್ತ ಹೊರಳುತ್ತಿದೆ ಹೊಸತಿಗೆ, ಬದಲಾವಣೆಗೆ ಹುಡುಕಾಡುವ ಮನಸ್ಸು.

ಈ ಬದಲಾವಣೆಯಲ್ಲಿ ಮುಂಚೂಣಿಗೆ ನಿಲ್ಲುವುದೆಂದರೆ ಸಸ್ಯಗಳಿಂದ ತೆಗೆದ ಸಾರ ತೈಲ (ಎಸೆನ್ಶಿಯಲ್ ಆಯಿಲ್)ಗಳು. ಸಸ್ಯಗಳ ತೊಗಟೆ, ಹೂವು, ಹಣ್ಣು, ಕಾಯಿ, ಎಲೆ, ಬೀಜ, ಬೇರು ಮೊದಲಾದವುಗಳಿಂದ ಸಾರ ಇಳಿಸಿ ತೆಗೆದ ಈ ತೈಲದ ಒಂದು ಹನಿ ಕೂಡ ಗುಣಕಾರಿ ಅಂಶಗಳನ್ನು ಹೊಂದಿರುವುದು ಇದರ ವೈಶಿಷ್ಟ್ಯ. ದೈಹಿಕ, ಮಾನಸಿಕ, ಭಾವನಾತ್ಮಕ ಸಮಸ್ಯೆಗಳನ್ನು ಗುಣಪಡಿಸಲು ಈ ಸಾರ ತೈಲಗಳನ್ನು ಬಳಸುವ ಸಂಪ್ರದಾಯ ಸಾವಿರಾರು ವರ್ಷಗಳಿಂದಲೇ ಚಾಲ್ತಿಯಲ್ಲಿದ್ದು, ಜೊತೆಗೆ ಸೌಂದರ್ಯವರ್ಧನೆಯಲ್ಲೂ ಈ ತೈಲಗಳ ಪಾತ್ರ ಮಹತ್ವದ್ದಾಗಿದೆ.

ಹರಳೆಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ, ಆಲಿವ್ ಎಣ್ಣೆ, ಗುಲಾಬಿ, ಮಲ್ಲಿಗೆಯಂತ ಸಾಂಪ್ರದಾಯಕ ತೈಲಗಳಿಂದ ಹಿಡಿದು, ಲ್ಯಾವೆಂಡರ್, ರೋಸ್‌ಮೆರಿ, ಜೊಜೊಬ, ಟೀ ಟ್ರೀ, ಅರ್ಗನ್, ಪೆಪ್ಪರ್‌ಮಿಂಟ್ ಮೊದಲಾದ ನೂರಾರು ಸಸ್ಯಮೂಲದ ತೈಲಗಳನ್ನು ಅರೋಮ ಚಿಕಿತ್ಸೆಯಲ್ಲಿ